<u>ಸಾಕ್ಷಿಯನ್ನು ದಿಃ23-03-2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ ಕೆ ಪಿ ಕೆ ವಕೀಲರಿಂದ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಆದರಲ್ಲಿ ಎಲ್ಲ ಸಂಗತಿಗಳು ಸರಿ ಹಾಗೂ ಸತ್ಯವಿರುತ್ತವೆ ಮತ್ತು ನನಗೆ ತಿಳಿದಿರುತ್ತವೆ.

ರೋಹಿತ್ ಈತನ ಜನನ ಪ್ರಮಾಣ ಪತ್ರದ ನೋಟರಿಯಿಂದ ದೃಡಿಕೃತ ಪ್ರತಿ ಮತ್ತು ಆತನ ಶಾಲಾ ಶುಲ್ಕ ಪಾವತಿ ರಶೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 1 ಮತ್ತು 2 ಎಂದು, ರಾಯಬಾಗದ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯದ ಎಂ ಸಿ ನಂ. 4/2020 ರ ಅರ್ಜಿಯ ದೃಡಿಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 3 ಎಂದು, ಸಸಾಲಟ್ಟಿ ಗ್ರಾಮದ ಆರ್ ಎಸ್ ನಂ. 60/2 ಎ, 66/2/1 ಮತ್ತು ಮುಗುಳಖೋಡ ಗ್ರಾಮದ ಆರ್ ಎಸ್ ನಂ. 287/16 ರ ಆರ್ ಟಿ ಸಿ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 6 ಎಂದು, ರೋಹಿತ ಈತನ ಚಿಕಿತ್ಸೆಯ ಆಸ್ಪತ್ರೆಯ ವರದಿ, ಎರಡು ಸಿ ವಿವರವುಳ್ಳ ಶಾಲಾ ರಶೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 7 ರಿಂದ 9 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಮುಖ್ಯ ವಿಚಾರಣೆಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಎದುರುದಾರ ಪರ ಶ್ರೀ ಎಂ ಪಿ ಟಿ ವಕೀಲರಿಂದ</u>**

ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .